“ವಿ.ಆರ್.ಎಸ್ ಬಂದಿತ್ತಲ್ವಾ, ನಾನು ನನ್ನ ಸ್ವಂತ ವ್ಯವಹಾರ ನಡೆಸುವ ಉದ್ದೇಶದಿಂದಲೇ ಆ ಸೌಲಭ್ಯ ಪಡೆದುಕೊಂಡೆ. ಇವನಿಗೆ ತಂದೆಯ ಕಪಿಮುಷ್ಟಿಯಿಂದ ತಪ್ಪಿಸಿಕೊಳ್ಳುವ ದಾರಿ ಇದು ಅಂತನಿಸಿತು, ಪಡೆದುಕೊಂಡ. ಸುಮಾರು ಆರುತಿಂಗಳ ಕಾಲ ಮುಂಬಯಿ ಆಸುಪಾಸಿನಲ್ಲಿ ಕಾಣಲಿಕ್ಕೇ ಸಿಕ್ಕಿರಲಿಲ್ಲ. ಒಂದು ದಿನ ನನ್ನ ಮಳಿಗೆಗೆ ಬಂದವನೇ, ‘ನಾನು ನಿನ್ನ ಜೊತೆ ಕೆಲಸಕ್ಕೆ ಸೇರಿಕೊಳ್ಳುತ್ತೇನೆ’ ಅಂದ. ನನ್ನ ಅಭಿಪ್ರಾಯಕ್ಕೂ ಕಾಯಲಿಲ್ಲ. ನನಗಾಗ ಹೊಸ ವ್ಯವಹಾರ. ಒಂದು ಹಂತದವರೆಗೆ ಬಂದು ವ್ಯಾಪಾರ ಕುದುರುವ ತನಕ ಸಹಾಯಕರು ಯಾರೂ ಬೇಡವಾಗಿತ್ತು. ಎಲ್ಲ ಕೆಲಸವನ್ನೂ ನಾನೇ ಮಾಡಿಕೊಂಡು ಸಂಭಾಳಿಸುತ್ತಿದ್ದೆ. ಇವ ಬಂದು ಗಂಟು ಬಿದ್ದ, ಬೇಡ ಎನ್ನಲಾಗಲಿಲ್ಲ. ನನ್ನ ಜೊತೆಯೇ ಉಳಿದ. ಮೂರು ವರ್ಷ ಈ ಮಳಿಗೆಯಲ್ಲೇ ವಾಸ. ವರ್ಷಕ್ಕೊಮ್ಮೆ ನನ್ನ ಮಾವಿನ ತೋಪನ್ನು ನೋಡಿಕೊಳ್ಳಲು ಹರ್ಶಿಗೆ ಕಳುಹಿಸುತ್ತಿದ್ದೆ.”

“ಇವನ ಅಪ್ಪ, ಅಮ್ಮ, ಹೆಂಡತಿ ಎಲ್ಲ ಎಲ್ಲಿಗೆ ಹೋದರು?”

“ಅವರ ಚಿಂತೆಯನ್ನೇ ಬಿಟ್ಟಿದ್ದ, ಹಾಗಾಗಿಯೇ ಇಲ್ಲಿ ತುಂಬ ನೆಮ್ಮದಿ ಅವನಿಗೆ. ಹೆಂಡತಿ ಅಂದ್ರೆ ಏನು ಸಾಬ್, ಇವನ ಅಪ್ಪ ಆಕೆಯನ್ನು ಇಟ್ಟುಕೊಂಡಿದ್ದ, ಹಲ್ಕಟ್. ಸೊಸೆಯೊಟ್ಟಿಗೆ ಚಕ್ಕಂದ ಆಡ್ತಾ ಇದ್ದದ್ದು ಕ್ವಾಟ್ರರ್ಸಿನಲ್ಲಿ ಹೆಚ್ಚಿನವರಿಗೆ ಗೊತ್ತಾಗಿತ್ತು. ಇವನ ಸಂಬಳ ಬಂದಾಗಲೆಲ್ಲ ಪೀಂಕಿಸಿ ಸೊಸೆಯೊಟ್ಟಿಗೆ ಕ್ಲಬ್ಬು, ಸಿನಿಮಾ ಅಂತೆಲ್ಲ ತಿರುಗಾಡ್ತಾ ಇರ್ತಿದ್ದ. ಮಾತಾಡುವ ಹಾಗಿರಲಿಲ್ಲ, ಬೆಲ್ಟು ಬೀಸುತ್ತಿದ್ದನಲ್ಲ. ಇವನ ಅಮ್ಮ... ನಮಗೆಲ್ಲ ಪ್ರೀತಿಯ ಮೌಶಿ, ಪಾಪ ಎಲ್ಲವನ್ನು ಗಮನಿಸಿಯೂ ಏನೂ ನೋಡದ ಹಾಗೆ ಗಾಂಧಾರಿಯಂತೆ ಇರಬೇಕಾಯಿತು.”

“ನೀನು ಈ ವಿಚಾರ ಹೇಳ್ತಾ ಇದ್ದದ್ದು ನೆನಪಿದೆ. ಆಗ ನನಗೆ ನಂಬುವುದು ಅಸಾಧ್ಯವಾಗಿತ್ತು. ಒಮ್ಮೆ ಅವರಿಬ್ಬರೂ ಜೊತೆಯಾಗಿ ರಿಕ್ಷಾದಲ್ಲಿ ಹೋಗ್ತಾ ಇದ್ದುದನ್ನು ನೀನು ತೋರಿಸಿದ್ದೆ ಕೂಡ. ಈಗ ಅವರೆಲ್ಲ ಎಲ್ಲಿದ್ದಾರೆ?”

“ಅವನ ಹತ್ತಿರ ವಿಚಾರಿಸಬೇಡಿ. ಅಪ್ಪನ ವಿಷಯ ಮಾತಾಡಿದರೆ ಮುಂದೆ ಒಂದು ವಾರ ಮೌನಿಯಾಗ್ತಾನೆ. ಅವರೆಲ್ಲ ಮುಂಬಯಿಯಲ್ಲಿ ಎಲ್ಲೋ ಒಂದು ಕಡೆ ಜೋಪಡಿಯಲ್ಲಿರಬೇಕು, ಸರಿಯಾಗಿ ಗೊತ್ತಿಲ್ಲ, ಅಥವಾ ಯಾವುದಾದರೂ ಸ್ಟೇಶನ್ನಿನಲ್ಲಿ ಭಿಕ್ಷೆ ಬೇಡುತ್ತಿರಲೂ ಸಾಕು. ಇವ ಸಂಪೂರ್ಣ ಬಿಟ್ಟು ಬಿಟ್ಟಿದ್ದಾನೆ ಅವರಿಬ್ಬರನ್ನು; ಅವರ ಗೊಡವೆಯೇ ಬೇಡ ಎಂಬಂತಿದ್ದಾನೆ. ತುಂಬ ಹಿಂಸೆ ಅನುಭವಿಸಿದ ಸಾಬ್. ನಿಜವಾಗಿಯೂ ಇವ ಸಾತ್ವಿಕ, ಕೈಯೂ ಶುದ್ಧ. ನನಗೀಗ ಇವನನ್ನು ಬಿಟ್ಟಿರುವುದನ್ನು ಯೋಚಿಸಲೂ ಸಾಧ್ಯವಾಗುತ್ತಿಲ್ಲ. ನಡುವೆ ಒಮ್ಮೆ ಕುರ್ಲಾಗೆ ಹೋಗಿದ್ದ. ಬರುವಾಗ ಮೌಶಿಯನ್ನು ಕರೆದುಕೊಂಡು ಬಂದ. ನಾನು ಮೊದಲು ವಾಸವಾಗಿದ್ದ ಫ್ಲ್ಯಾಟಿನಲ್ಲಿ ಇವನಿಗೆ ವಾಸಕ್ಕೆ ಅನುಕೂಲ ಮಾಡಿಕೊಟ್ಟೆ. ಫಿಯಟಿನಲ್ಲಿ ಕೆಲಸ ಮಾಡುತ್ತಿದ್ದಾಗ ತೆಗೆದುಕೊಂಡದ್ದು ಅದು. ಆಮೇಲೆ, ಒಂದು ದಿನ ಹರ್ಶಿಯಿಂದ ವಾಪಸು ಬರುವಾಗ ಈ ಹುಡುಗಿಯನ್ನು ಕಟ್ಟಿಕೊಂಡು ಬಂದ. ಹರ್ಶಿಯಲ್ಲಿ ಈಕೆಯ ಮನೆಯವರಿದ್ದಾರೆ, ನನಗೆ ಗೊತ್ತಿರುವವರೇ. ‘ಮದುವೆಯಾಗ್ತೇನೆ ಇವಳನ್ನು’ ಅಂತ ಹೇಳಿ ತಾಳಿ ಕಟ್ಟಿದ. ಈಗ ಇವ್ರಿಗೆ ಇಬ್ರು ಹೆಣ್ಮಕ್ಕಳು, ಇಲ್ಲೇ ಸ್ಕೂಲಿನಲ್ಲಿ ಓದ್ತಾ ಇದ್ದಾರೆ. ಅದು ಹೇಗೋ ಇವನ ಜೊತೆ ಸಹೋದರ ವಾತ್ಸಲ್ಯ ಬೆಳೆದು ಬಿಟ್ಟಿದೆ ಸಾಬ್” ಎಂದೆ.

ಮೂರ್ತಿಯವರು ತನ್ಮಯರಾಗಿ ಕೇಳುತ್ತಿದ್ದರು. ಸ್ವಲ್ಪ ಸಮಯ ಆಶ್ಚರ್ಯವೂ ಸಂತೋಷವೂ ತುಂಬಿ ಮೌನವಾಗಿ ಕುಳಿತರು. “ಯೇ... ಬಾರೋ ಇಲ್ಲಿ, ಮೂರ್ತಿ ಸಾಹೇಬರಿಗೆ ಊಟ ಹಾಕಿಸಬೇಡವೇ ನಾವು” ಅಂದಿದಕ್ಕೆ ನಗು ನಗುತ್ತಾ ಬಂದ ಸುಭಾಷ್.

★★★

ಆ ದಿನಗಳಲ್ಲಿ ಮನೆಗೆ ಹೋಗುವುದು ಅಂದರೆ ಹಿಂಸೆಯಾಗುತ್ತಿದ್ದ ಕಾಲವಾಗಿತ್ತು ನನಗೆ. ಅಪ್ಪ